# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ವಾರ್ಡ್ 93, ವಸಂತನಗರ

### ವಾರ್ಡ್ ಸಮಿತಿ ಸಭೆಯ ನಡವಳಿಗಳು

ದಿನಾಂಕ: 03–07–2021 ರಂದು ಶನಿವಾರ ಬೆಳಿಗ್ಗೆ 11.00 ಗಂಟೆಗೆ, ವಾರ್ಡ್ ಕಛೇರಿಯಲ್ಲಿ ಶ್ರೀಮತಿ ಮಂಜುಳಮ್ಮ, ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ತಹಶಿಲ್ದಾರ್(ಚುನಾವಣೆ) ಬಿ.ಬಿ.ಎಂ.ಪಿ ರವರ ಅಧ್ಯಕ್ಷತೆಯಲ್ಲಿ ಸಮಿತಿ ಸಭೆಯನ್ನು ನಡೆಸಲಾದ ವಾರ್ಡ್ ಸಮಿತಿಯ ಸಭೆಯ ನಡವಳಿ:–

ಈ ಸಭೆಗೆ ಹಾಜರಾದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರುಗಳ ವಿವರಗಳು

| | | |
|---|---|---|
| **ಸದಸ್ಯರುಗಳು** | | |
| 1 | ಶ್ರೀಮತಿ ಚಿತ್ರ ವೆಂಕಟೇಶ್ | ಸಮಿತಿ ಸದಸ್ಯರು |
| 2 | ಶ್ರೀ. ಕಿಶೋರ್ ಸಿಂಗ್ | ಸಮಿತಿ ಸದಸ್ಯರು |
| 3 | ಶ್ರೀ. ರಾಜ್ ದುಗ್ಗಾರ್ | ಸಮಿತಿ ಸದಸ್ಯರು |
| **ಅಧಿಕಾರಿಗಳು** | | |
| 1 | ಶ್ರೀ. ಕೀರ್ತಿ | ಮಾರ್ಷಲ್ |
| 2 | | ಕಿರಿಯ ಆರೋಗ್ಯಾಧಿಕಾರಿ |
| 3 | ಶ್ರೀ ಮಹಮದ್ ಜಾವೇದ್ | ಸಹಾಯಕ ಕಾರ್ಯಪಾಲಕ ಅಭಿಯಂತರರು |
| 4 | ಶ್ರೀ ಮೂರ್ತಿ | ಕಂದಾಯ ವಸೂಲಿಗಾರರು |
| **ಗೈರುಹಾಜರಾದವರು** | | |
| 1 | ಶ್ರೀ ನವೀನ್ ಕುಮಾರ್ | MOH |
| 2 | ಶ್ರೀ ಶ್ರೀನಿವಾಸ್ | ಸಹಾಯಕ ಅಭಿಯಂತರರು ಮೇಜರ್ ರೋಡ್ |
| 3 | ಲಿಂಗಯ್ಯ ಕೆ.ಬಿ ಬಸವರಾಜ್ | ಸಹಾಯಕ ಕಂದಾಯ ಅಧಿಕಾರಿಗಳು |
| 4 | ಶ್ರೀ. ತಿಮ್ಮೇಗೌಡ | ಜೂನಿಯರ್ ಇಂಜಿನಿಯರ್ ಬೆಸ್ಕಾಂ |
| 5 | ಶ್ರೀಮತಿ ಮಂಜುಳ | ಅರಣ್ಯ ಇಲಾಖೆ |
| 6 | ಡಾ॥ ಸಯ್ಯದ್ | ಪಿ.ಹೆಚ್.ಎಸ್ (ಪ್ರಾಥಮಿಕ ಆರೋಗ್ಯ ಕೇಂದ್ರ) |
| 7 | ಶ್ರೀ. ಸೈಪುಲ್ಲಾ | ಸ್ಟ್ರೀಟ್ ಲೈಟ್ |
| 8 | ಶ್ರೀಮತಿ ಪುಷ್ಪ | ಕಂದಾಯ ನಿರೀಕ್ಷಕರು |

ಸಭೆಯಲ್ಲಿ ನೋಡಲ್ ಅಧಿಕಾರಿಗಳಾದ ಶ್ರೀಮತಿ ಆರ್ ಮಂಜುಳಮ್ಮ ತಹಶೀಲ್ದಾರ್ (ಚುನಾವಣೆ) ರವರು ಎಲ್ಲರನ್ನು ಸ್ವಾಗತಿಸುತ್ತಾ, ಹಿಂದಿನ ಸಭೆಯ ಅನುಪಾಲನಾ ವರದಿಯನ್ನು ಸಭೆಗೆ ತಿಳಿಸಿದರು.

ಸಹಾಯಕ ಕಾರ್ಯಪಾಲಕ ಅಭಿಯಂತರರು ಈ ಹಿಂದೆ ಬಾಕಿ ಇದ್ದ 42 ದೂರುಗಳ ಪೈಕಿ 5 ಟೆಂಡರ್ ಕಾಮಗಾರಿಗಳು ಪ್ರಕ್ರಿಯೆಯಲ್ಲಿದ್ದು, 13 ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಉಳಿದ ಕಾಮಗಾರಿ ಮುಕ್ತಾಯಗೊಂಡಿರುತ್ತದೆ. ಎಂದು ಸಭೆಗೆ ತಿಳಿಸಿದರು. ದಿನಾಂಕ: 10–07–2021ರೊಳಗಾಗಿ ಕನ್ನಿಂಗ್ ಹ್ಯಾಮ್ ಕ್ರೆಸಂಟ್ ರೋಡ್‌ನ ದುರಸ್ತಿ ಕೆಲಸವನ್ನು ಪ್ರಾರಂಭಿಸುವುದಾಗಿ ತಿಳಿಸಿದರು.

ಶ್ರೀ. ರಾಜ್ ದುಗ್ಗಾರ್., ರವರು 2 ಲಾರಿ ಟಾರ್ ವ್ಯವಸ್ಥೆ ಮಾಡಿದಲ್ಲಿ ಹಲವು ಪಾಟ್‌ಹೋಲ್ಸ್‌ಗಳ ದುರಸ್ತಿ ಕಲಸವನ್ನು ಬಗೆಹರಿಯುವುದಾಗಿ ಸಭೆಗೆ ತಿಳಿಸಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸಹಾಯಕ ಕಾರ್ಯಪಾಲಕ ಅಭಿಯಂತರರು  ಟಾರ್ ವ್ಯವಸ್ಥೆ ಮಾಡುವುದಾಗಿ ತಿಳಿಸಿದರು.

ಶ್ರೀ. ರಾಜ್ ದುಗ್ಗಾರ್., ರವರು ತೋಟಗಾರಿಕೆ ಇಲಾಖೆಗೆ ಸಂಬಂದಿಸಿದಂತೆ, ಕೆಲವು ಕಾಮಗಾರಿಗಳು ಬಾಕಿ ಇರುವುದಾಗಿಯೂ ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆಯಲು, ಸಭೆಗೆ ತಿಳಿಸಿದರು.

ಶ್ರೀ. ಕಿಶೋರ್ ಸಿಂಗ್ ರವರು, 8ನೇ ಮುಖ್ಯ ರಸ್ತೆಯ ಪಾದಾಚಾರಿ ಮಾರ್ಗವನ್ನು ತುರ್ತಾಗಿ ದುರಸ್ತಿ ಪಡಿಸಲು ತಿಳಿಸಿದರು.

ಶ್ರೀಮತಿ ಚಿತ್ರ ವೆಂಕಟೇಶ್ ಮತ್ತು ಶ್ರೀ. ರಾಜ್ ದುಗ್ಗಾರ್., ರವರು ಆನೆ ಪಾರ್ಕಿನಲ್ಲಿ ಈಗಾಗಲೇ ಇರುವಂತಹ ದೀಪಗಳು ಮಂದ ಬೆಳಕನ್ನು ನೀಡುತ್ತಿದ್ದು, ಇದರಿಂದ ಬೆಳಕು ಸಾಕಾಗುತ್ತಿರುವುದಿಲ್ಲ ಆದಪ್ರಯುಕ್ತ ಹೆಚ್ಚು ಪ್ರಖರವಾದ ಬೆಳಕನ್ನು ನೀಡುವ ದೀಪಗಳನ್ನು ಅಳವಡಿಸಲು ಸ್ಟ್ರೀಟ್ ಲೈಟ್‌ರವರಿಗೆ ತಿಳಿಸಿದರು. ಅಲ್ಲದೆ 6ನೇ ಕ್ರಾಸ್‌ನ ಕಾಮಗಾರಿ ಮತ್ತು 13ನೇ ಕ್ರಾಸ್‌ನಲ್ಲಿ ಟೈಮರ್, ಡೀಮರ್‌ಗಳ ಸಮಸ್ಯೆಯನ್ನು ಸರಿಪಡಿಸಲು ತಿಳಿಸಿದರು.

ಶ್ರೀಮತಿ ಚಿತ್ರ ವೆಂಕಟೇಶ್ ರವರು ಪೌರಕಾರ್ಮಿಕರು ವ್ಯಾಕ್ಸಿನೇಷನ್ ಹಾಕಿಸಿಕೊಳ್ಳಲು ಆಸ್ಪತ್ರೆವರೆಗೆ ಹೋಗಲು ಸಾದ್ಯವಾಗುವುದಿಲ್ಲ ಆದಪ್ರಯುಕ್ತ ಪೌರಕಾರ್ಮಿಕರು ಇರುವಲ್ಲಿಯೇ ವ್ಯಾಕ್ಸಿನೇಷನ್ ಹಾಕುವ ವ್ಯವಸ್ಥೆ ಕಲ್ಪಿಸಲು ಕೋರಿದರು.

ಶ್ರೀ. ರಾಜ್ ದುಗ್ಗಾರ್., ರವರು ಈ ಸಾಲಿನ ವಾರ್ಡ್ ಬಜೆಟ್ ವಿವರ ತಿಳಿಸಲು ಕೋರಿದರು, ಮಾರ್ಷಲ್ ಮಂಜುರವರು ಕೋವಿಡ್–19ರ ನಿಯಮಗಳನ್ನು ಸರಿಯಾಗಿ ಪಾಲಿಸುವಂತೆ, ಟೀ ಅಂಗಡಿ, ಹೋಟೆಲ್ ಬಸ್ ಸ್ಟಾಪ್ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ (ಬಸ್ ಸ್ಟಾಪ್) ನಿಂತಿರುವ ಜನರಿಗೆ ಕೋವಿಡ್–19ರ ಕುರಿತು ಅರಿವು ಮೂಡಿಸಲು ಅಗತ್ಯ ಕ್ರಮವಹಿಸಲು ತಿಳಿಸಿದರು ಹಾಗೂ ರೆವಿನ್ಯೂ ಇಲಾಖೆಯಿಂದ 2021–2022ರ ಆದಾಯ ತೆರಿಗೆ ಸಂಗ್ರಹದ ಗುರಿಯ ಬಗ್ಗೆ ಕೇಳಿದರು. ಶ್ರೀ ಮೂರ್ತಿ., ಕಂದಾಯ ವಸೂಲಿಗಾರರು 12.0 ಕೋಟಿ ಆದಾಯ ತೆರಿಗೆ ಸಂಗ್ರಹಿಸುವ ಗುರಿ ಹೊಂದಿದ್ದು, ಇದುವರೆಗೂ 8.5 ಕೋಟಿ ವಸೂಲಾಗಿರುವುದಾಗಿ ತಿಳಿಸಿದರು.

ಶ್ರೀ ಕುಮಾರ್., ರವರು 1ನೇ ಮೈನ್, ಶೇಷಾದ್ರಿಪುರಂ ರಸ್ತೆಯ ನವೀಕರಣ ಕಾಮಗಾರಿ ಪೂರ್ಣಗೊಳ್ಳುವವರಗೆ ಜನರಿಗೆ ಓಡಾಡಲು ತುಂಬಾ ತೊಂದರೆಯಾಗುತ್ತಿರುವುದಾಗಿ ತಿಳಿಸಿದರು.

ಅದರಂತೆ, ಕೆಲವೊಂದು ಇಲಾಖೆಯವರು ಪ್ರತಿ ಸಭೆಗೆ ಹಾಜರಾಗದೆ ಇರುವುದರಿಂದ, ಸಮಿತಿ ಸದಸ್ಯರು ಕೇಳುವ ಪ್ರಶ್ನಗಳಿಗೆ ಉತ್ತರಿಸಲು ಸಾದ್ಯವಾಗುವುದಿಲ್ಲ ಆದಕಾರಣ ಸಂಬಂಧಪಟ್ಟ ಇಲಾಖೆಯವರಿಗೆ ನೋಟೀಸ್ ನೀಡಲು ಶ್ರೀ.ರಾಜಶೇಖರ್, ಕಾರ್ಯದರ್ಶಿ ರವರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು ಹಾಗೂ ಬಾಕಿ ಇರುವ ಕಾಮಗಾರಿಗಳನ್ನು ತುರ್ತಾಗಿ ಇತ್ಯರ್ಥಪಡಿಸುವಂತೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ತಿಳಿಸುತ್ತಾ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

R. Manjunatha
ನೋಡಲ್ ಅಧಿಕಾರಿಗಳು
ವಾರ್ಡ್– 93, ವಸಂತನಗರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಸದಸ್ಯ ಕಾರ್ಯದರ್ಶಿಗಳು
ವಾರ್ಡ್– 93, ವಸಂತನಗರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:–

1. ಮಾನ್ಯ ಆಡಳಿತಗಾರರು ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಲಯ ಆಯುಕ್ತರು(ಪೂರ್ವ ವಲಯ) ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಜಂಟಿ ಆಯುಕ್ತರು (ಪೂರ್ವ ವಲಯ) ಅವಗಾಹನೆಗೆ ಸಲ್ಲಿಸಿದೆ.
5. ಕಛೇರಿ ಕಡತಕ್ಕೆ.